**ಓ.ಎಸ್. ನಂ.12/2019**

**ಪಿಡಬ್ಲ್ಯೂ.1**

**ದಿಃ29.11.2022**

**ಸಾಕ್ಷಿಯನ್ನು ಪುನಃ ಕರೆಯಿಸಿ ಪ್ರಮಾಣ ವಚನ ಭೋಧಿಸಲಾಯಿತು.**

**ಮುಂದುವರೆದ ಪಾಟಿ ಸವಾಲು ಪ್ರತಿವಾದಿ ಪರ ವಕೀಲರಿಂದಃ**

ನಾನು ದಾವೆಯಲ್ಲಿ ಮೊದಲು ಕೇಳಿದ ಪ್ರಾರ್ಥನೆ ಮತ್ತು ವಾದ ಪತ್ರ ತಿದ್ದುಪಡಿ ಆದ ನಂತರ ಕೋರಿದ ಪ್ರಾರ್ಥನೆ ನನಗೆ ಗೊತ್ತಿಲ್ಲ. ನಾನು ವಾದ ಪತ್ರದಲ್ಲಿ ಕಾಣಿಸಿದ ಪೌಂಡಿರಿಯಲ್ಲಿ ಅಂದಾಜು 10 ಲಕ್ಷ ರೂ. ಬೆಲೆ ಬಾಳುವ ವಸ್ತುಗಳಿವೆ. ಸದರಿ ವಿಷಯವನ್ನು ನಾನು ನನ್ನ ವಕೀಲರಿಗೆ ಹೇಳಿರುತ್ತೇನೆ. ಪೌಂಡರಿಯು ಅಂದಾಜು 10 ಲಕ್ಷ ರೂ. ಬೆಲೆ ಎಂದು ಹೇಳಿದ್ದರಿಂದ, ದಾವೆಯು ಈ ನ್ಯಾಯಾಲಯದ ವ್ಯಾಪ್ತಿಗೆ ಬರುವುದಿಲ್ಲ ಎಂದರೆ ಸಾಕ್ಷಿಯು ಮೌನವಾಗಿರುತ್ತಾರೆ. ದಾವಾ ಆಸ್ತಿಯ ಮೌಲ್ಯ ರೂ. 25 ಲಕ್ಷ ರೂ. ಬೆಲೆಬಾಳುವುದರಿಂದ ನ್ಯಾಯಾಲಯದ ವ್ಯಾಪ್ತಿಯಲ್ಲಿ ಬರುವುದಿಲ್ಲ ಎಂದರೆ ಸರಿಯಲ್ಲ. ನನ್ನ ಪ್ರಕಾರ ದಾವಾ ಆಸ್ತಿ ಮೌಲ್ಯ ರೂ. 5 ಲಕ್ಷ ಬೆಲೆಬಾಳುತ್ತದೆ. ಸಬ್ ರಜಿಸ್ಟರ್ ಕಚೇರಿಯಿಂದ ದಾವಾ ಆಸ್ತಿಯ ಮೌಲ್ಯದ ಗರಪಟ್ಟಿ ಹಾಜರುಪಡಿಸಲು ನನಗೆ ಯಾವುದೇ ತೊಂದರೆ ಇರುವುದಿಲ್ಲ. ನಾನು ನ್ಯಾಯಾಲಯಕ್ಕೆ ದಾವಾ ಆಸ್ತಿಯ ಮೌಲ್ಯವನ್ನು ಮುಚ್ಚಿಟ್ಟು, ತಪ್ಪು ಮೌಲ್ಯವನ್ನು ಹೇಳಿದ್ದೇನೆ ಎಂದರೆ ಸರಿಯಲ್ಲ. ಪ್ರತಿವಾದಿಯ ಬಾಡಿಗೆದಾರ ಆಗಿದ್ದು, ಅವರ ವಿರುದ್ಧ ನಾನು ಯಾವುದೇ ಕ್ರಮವನ್ನು ತೆಗೆದುಕೊಂಡಿಲ್ಲ ಎಂದರೆ ಸರಿ. ಪ್ರತಿವಾದಿಗೆ ತೊಂದರೆ ಕೊಡುವ ಉದ್ದೇಶದಿಂದ ಸುಳ್ಳು ದಾವೆ ಸಲ್ಲಿಸಿ, ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಮರುವಿಚಾರಣೆಃ ಇರುವುದಿಲ್ಲ

(ಮುಕ್ತ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ಬೆರಳಚ್ಚುಪಡಿಸಲಾಯಿತು.)

ಓದಿ ಹೇಳಿ ಕೇಳಿ ಸರಿ ಇದೆ.

Sd/

2 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು
ಮತ್ತು ಜೆ ಎಂ ಎಫ್ ಸಿ, ಹರಿಹರ